INDIAN JOURNAL OF HISTORY AND ARCHAEOLOGY
ISSN (e):2582-225X
Vol-3, Issue -5, January-February, 2022,
PageNo,01-08
Peer Reviewed Journal, Referred Journal

# ಕೊಡಗಿನ ಹಾಲೇರಿ ಮನೆತನದ ಚಾರಿತ್ರಿಕ ಇತಿಹಾಸ ಕುರಿತ ಒಂದು ವಿಮರ್ಶೆ

**ಪ್ರಕಾಶ್.ಬಿ.ಸಿ.**[1]
**ಡಾ.ಎಂ.ವಿ.ರಮೇಶ್**[2]

ಮಡಿಕೇರಿ ಅಥವಾ ಕೊಡಗು ಹಾಲೇರಿ ಮನೆತನದ ರಾಜ ಸಂತತಿಯ ಒಂದು ರಾಜಧಾನಿಯಾಗಿತ್ತು. ಇದು ವೀರರಾಜ ಚಿಕ್ಕದೇವರಾಜೇಂದ್ರ ಮತ್ತು ಚಿಕ್ಕವೀರ ರಾಜೇಂದ್ರ ಅವರು ಆಳಿದ ನಾಡು. ಇದು ಕೊಡಗಿನ ಹಾಲೇರಿ ವಂಶಸ್ಥರ ಎರಡನೆಯ ರಾಜಧಾನಿ ಎಂದು ಇತಿಹಾಸ ದಾಖಲೆಗಳಿಂದ ತಿಳಿದುಬರುತ್ತದೆ. ಕೊಡಗು ಜಿಲ್ಲೆಯೂ ಸುಮಾರು 4102 ಚದರ ಕಿಲೋ ಮೀಟರ್ ವಿಸ್ತೀರ್ಣವನ್ನು ಹೊಂದಿದೆ. ಕೊಡಗು ಜಿಲ್ಲೆಯೂ ಕೇವಲ ಮೂರು ತಾಲ್ಲೂಕುಗಳನ್ನು ಹೊಂದಿದೆ. ಅವುಗಳೆಂದರೆ; ಮಡಿಕೇರಿ, ಸೋಮವಾರಪೇಟೆ ಮತ್ತು ವೀರರಾಜೇಂದ್ರಪೇಟೆ (ವಿರಾಜಪೇಟೆ) ಆಗಿರುತ್ತದೆ.[1] ಕೊಡಗನ್ನು ಪೂರ್ವದಲ್ಲಿ ಮತ್ಸ್ಯದೇಶವೆಂದು ಕೂಡ ಕರೆಯಲಾಗಿದೆ. ಇದಕ್ಕೆ ಎರಡು ಕಥೆಗಳನ್ನು ಪುರಾಣಕಾರರು ಕೊಟ್ಟಿದ್ದಾರೆ. ಕೊಡಗಿನಲ್ಲಿ ಅರ್ಧಚಂದ್ರವೆಂದು ಕರೆಯುತ್ತಿದ್ದ ಬೆಟ್ಟವೊಂದಿದೆ. ಅದರ ಹತ್ತಿರದಲ್ಲೇ ಒಂದು ಪವಿತ್ರವಾದ ತೀರ್ಥವಿದೆ. ಈ ತೀರ್ಥದಲ್ಲಿ ವಿಷ್ಣುವು ಮೀನಿನ ಆಕಾರವನ್ನು ತಾಳಿ ಶಿವನನ್ನು ಪೂಜಿಸಿದನು. ಶಿವನು ಈ ಮೀನಿಗೆ ಅಮರತ್ವವನ್ನು ಅನುಗ್ರಹಿಸಿದನು. ಆಗ ವಿಷ್ಣುವು ಈ ದೇಶಕ್ಕೆ ಮತ್ಸ್ಯ ದೇಶ ಎಂದು ಹೆಸರು ಕೊಟ್ಟರು.[2]

ಕೊಡಗಿಗೆ ಕೋಡ್ ದೇಶವೆಂಬ ಹೆಸರೂ ಸಹ ಇತ್ತು. ಈ ಹೆಸರಿನ ಮೂಲವು ಹೀಗಿದೆ. ಕೊಡಗಿನ ಮೊದಲನೆಯ ರಾಜನಾದ ಚಂದ್ರವರ್ಮನಿಗೆ ಅವನ ಶೂದ್ರ ಮಡದಿಯಲ್ಲಿ ಹನ್ನೊಂದು ಗಂಡು ಮಕ್ಕಳು ಜನಿಸಿದ್ದವು. ಅವುಗಳು ಪ್ರಾಯಕ್ಕೆ ಬಂದ ಮೇಲೆ ಇವರು ವಿದರ್ಭ ರಾಜ್ಯದ ರಾಜನು ಶೂದ್ರ ಮಡದಿಯಲ್ಲಿ ಜನಿಸಿದ ನೂರು ಹೆಣ್ಣು ಮಕ್ಕಳನ್ನು ವಿವಾಹವಾದನು. ಚಂದ್ರವರ್ಮನ ಹಿರಿಯ ಮಗನಾದ ದೇವಕಾಂತನು ಇಪ್ಪತ್ತು ತರುಣಿಯರನ್ನು, ಎರಡನೆಯವನು ಹದಿನಾರು, ಮೂರನೆಯವರು

---

1. **ಸಂಶೋಧಕರು**, ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ,ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮುಕ್ತ ಗಂಗೋತ್ರಿ, ಮೈಸೂರು.

2 .**ಸಹಾಯಕ ಪ್ರಾಧ್ಯಾಪಕರು**, ಇತಿಹಾಸ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮುಕ್ತ ಗಂಗೋತ್ರಿ, ಮೈಸೂರು.

ಹನ್ನೆರಡು, ನಾಲ್ಕನೆಯವರು ಹತ್ತು, ಐದು ಮತ್ತು ಆರನೆಯವನು ಎಂಟೆಂಟು, ಏಳು ಮತ್ತು ಎಂಟನೆಯವರು ತಲಾ ಏಳು ರಾಜಕುಮಾರಿಯರನ್ನು ಉಳಿದ ಮೂವರಲ್ಲಿ ಪ್ರತಿಯೊಬ್ಬರೂ ನಾಲ್ವರನ್ನು ವಿವಾಹವಾದರು. ಪ್ರತಿಯೊಬ್ಬ ರಾಜಕುಮಾರನಿಗೂ ತಲಾ ನೂರಕ್ಕಿಂತ ಹೆಚ್ಚು ಗಂಡು ಮಕ್ಕಳಾದವು. ಅವರು ದೊಡ್ಡವರಾದ ಮೇಲೆ ಇವರೂ ವಿದರ್ಭ ರಾಜಕುಮಾರಿಯರೊಡನೆ ಈ ದೇಶಕ್ಕೆ ಬಂದ ಜನರೂ ತಮ್ಮ ಜೀವನಕ್ಕೆ ಬೇಕಾದ ಬೆಳೆ ಬೆಳೆಸುವುದಕ್ಕೂ ವಾಸ ಮಾಡುವುದಕ್ಕೂ ಸ್ಥಳವು ಸಾಲದ್ದರಿಂದ ತಾವಿದ್ದಂತಹ ಮೊದಲಿನ ಸ್ಥಳದ ಸುತ್ತಲೂ ಐದು ಹರದಾರಿ (ಹದಿನೈದು ಮೈಲುಗಳು)ಗಳೊಡನೆ ಪ್ರದೇಶವನ್ನು ಸಮತಟ್ಟಗಳಾಗಿ ಮಾಡಿ ವ್ಯವಸಾಯಕ್ಕೆ ಯೋಗ್ಯವಾಗಿ ಮಾಡಿದರು. ಸರಿಯಾದ ಉಪಕರಣಗಳಿಲ್ಲದ ಆ ಸಮಯದಲ್ಲಿ ಅವರು ಕಾಡು ಹಂದಿಗಳು ಮಣ್ಣನ್ನು ಎಳೆಯುವ ಹಾಗೆ ತಮ್ಮ ಕೈಗಳಿಂದ ಮತ್ತು ಬೆರಳುಗಳಿಂದ ಉಗುರುಗಳಿಂದ ಕೆಲಸ ಮಾಡಬೇಕಾಗಿದ್ದುದರಿಂದ ಅವರು ಹಾಗೆ ಸಮಟ್ಟುಗಳಾಗಿ ಮಾಡಿದ ಈ ದೇಶಕ್ಕೆ ಕ್ರೋಢ್ ದೇಶ ಎಂದು ಕರೆಯಲಾಯಿತು. ಕ್ರೋಢ್ ದೇಶವೆಂಬ ಹೆಸರು ಕ್ರಮೇಣ ಕೊಡಗು ಎಂಬ ರೂಪವನ್ನು ತಾಳಿತು ಎಂದು ಹೇಳುತ್ತಾರೆ.[3] ಈ ಕಥೆಯಲ್ಲಿ ಕೊಡಗಿನ ಚರಿತ್ರೆ ಮೂಲವೂ ಕೊಡವರ ಹುಟ್ಟಿನ ಮೂಲವೂ ಅಡಗಿದೆಯೆಂದೂ ಕರ್ನಲ್ ವಿಕ್ಸಿ ಎಂಬ ಚರಿತ್ರಕಾರರು ಅಭಿಪ್ರಾಯ ಪಡುತ್ತಾರೆ. ಆ ಚಂದ್ರವರ್ಮನು ಕದಂಬ ರಾಜವಂಶದ ಒಬ್ಬ ರಾಜನೆಂದೂ ಕದಂಬರು ಕ್ರಿಸ್ತಶಕದ ಆದಿಶತಮಾನದಲ್ಲಿ ಕೊಡಗನ್ನು ಆಳುತ್ತಿದ್ದರೆಂದೂ ಕೆಲವು ಚರಿತ್ರಕಾರರು ಪ್ರತಿಪಾದಿಸುತ್ತಾರೆ. ಚಂದ್ರವರ್ಮನೆಂಬ ಹೆಸರು ಕ್ರಿಸ್ತಪೂರ್ವ ಎರಡನೆಯ ಶತಮಾನದಿಂದ ಕ್ರಿ.ಶ.6ನೆಯ ಶತಮಾನದವರೆಗೆ ಆಳಿದ ಕದಂಬ ವಂಶದ ರಾಜರುಗಳು ಇದ್ದಾರೆ. ಕ್ರಿ.ಶ.6ನೆಯ ಶತಮಾನದಲ್ಲಿ ಕದಂಬರು ಚಾಲುಕ್ಯರಿಗೂ ಸೋತು ಅವರ ಮಾಂಡಲೀಕರಾದರು. ಆಗ ಕದಂಬ ರಾಜ್ಯವು ಒಡೆದು ಅವರ ವಂಶದವರಿಂದಲೇ ಆಳ್ವಿಕೆಗೊಳಗಾದ ಚಿಕ್ಕಚಿಕ್ಕ ರಾಜ್ಯಗಳು ಉತ್ತರ ಕೊಡಗು, ಮಂಜರಬಾದ್‌ನಲ್ಲಿಯೂ ಕೊಡಗಿನ ದಕ್ಷಿಣ ಬಯಲುನಾಡು ಅಥವಾ ಈಗಿನ ವೈನಾಡಿನಲ್ಲಿ ಗೋವಾ ಮತ್ತು ಧಾರವಾಡದ ಹಾನಗಲ್ಲುಗಳಲ್ಲಿಯೂ ಕ್ರಿ.ಶ.12ನೆಯ ಶತಮಾನದವರೆಗೆ ಇದ್ದುದು ತಿಳಿದುಬರುತ್ತದೆ.[3 4]

ಕೊಡಗು ರಾಜರ ಆಸ್ಥಾನವಿದ್ದ ಹಾಲೇರಿಯು ಮಡಿಕೇರಿಯಿಂದ ಹೆಚ್ಚು ದೂರವೇನೂ ಇಲ್ಲ. ಸೋಮವಾರಪೇಟೆ ತಾಲ್ಲೂಕಿನ ಒಂದು ಕುಗ್ರಾಮವೇ[5] ಹಾಲೇರಿ ರಾಜಮನೆತನದ ಸ್ಥಾಪಕ ವೀರರಾಜನ ಆಸ್ಥಾನ ಈ ಗುಡ್ಡ ಮತ್ತು ಕೆರೆಯ ನಡುವೆ ಇತ್ತು ಎಂದು ಹೇಳಲಾಗುತ್ತದೆ. ಕೊಡಗು ಪ್ರಾಕೃತಿಕವಾಗಿ ಚಿಕ್ಕ ಜಿಲ್ಲೆಯಾದರೂ ಸಹ ಸಾಂಸ್ಕೃತಿಕವಾಗಿ ತನ್ನದೇ ಆದಂತಹ ಇತಿಹಾಸವನ್ನು ಹೊಂದಿದೆ. ಭೌಗೋಳಿಕವಾಗಿ ಹಾಸನ, ದಕ್ಷಿಣ ಕನ್ನಡ, ಹುಣಸೂರು ಹಾಗೂ ಕೇರಳ ಪ್ರದೇಶಗಳನ್ನು ಎಲ್ಲೆಯಾಗಿ ಹೊಂದಿರುವ ಕೊಡಗು ಹಾಗೂ ಕೊಡಗಿನ ಜನತೆ ಸಹಜವಾಗಿಯೇ ಈ ನೆರೆಯ ಪ್ರದೇಶಗಳ

ಸಂಸ್ಕೃತಿಯ ಪ್ರಭಾವಕ್ಕೆ ಒಳಗಾದ ಕಾರಣ ಸ್ಥಳೀಯ ಜಾನಪದರಲ್ಲಿ ಈ ಗಡಿ ಪ್ರದೇಶಗಳ ಸಂಸ್ಕೃತಿಯ ಸಮ್ಮಿಲನವಿದೆ.

ಕೊಡಗನ್ನಾಳಿದ ವಿವಿಧ ರಾಜವಂಶಗಳಾದ ಗಂಗ, ಚೋಳ, ಕೊಂಗಾಳ್ವ, ಚಂಗಾಳ್ವ, ಹೊಯ್ಸಳ ಹಾಗೂ ವಿಜಯನಗರದ ಅರಸರು ಕೊಡಗಿನ ಒಡೆಯರು, ಹಾಲೇರಿ ರಾಜವಂಶದವರು, ಬ್ರಿಟಿಷರು ಇವರೆಲ್ಲರೂ ಆಳ್ವಿಕೆ ನಡೆಸಿದ್ದಾರೆ.[6] ಅವರುಗಳಲ್ಲಿ ಕೊಡಗಿನ ಹಾಲೇರಿ ಮನೆತನವು ಕ್ರಿ.ಶ.1633 ರಿಂದ 1834ರವರೆಗೆ ಆಳ್ವಿಕೆ ನಡೆಸಿರುವ ಕುರಿತು ತಿಳಿದುಬರುತ್ತದೆ. ಇವರ ನೆಲೆಗಳು ಮಡಿಕೇರಿ, ಹಾಲೇರಿ, ನಾಲ್ಕು ನಾಡುಗಳು ರಾಜಧಾನಿಗಳಾಗಿದ್ದವು. ಮೊದಲಿಗೆ ಹಾಲೇರಿ ರಾಜಧಾನಿಯಾಗಿತ್ತು. ಹಾಲೇರಿ ಮನೆತನವನ್ನು ವೀರಶೈವ ಮತದವರೆಂದು ತಿಳಿದುಬಂದಿದೆ. ಈ ವಂಶದವರು ಅರಸರೂ ಒಡೆಯರು ಎಂಬ ಉತ್ತರ ನಾಮವನ್ನು ಬಳಸುತ್ತಿದ್ದರು. ಈ ವಂಶದರಾಜ ವೀರರಾಜೇಂದ್ರ (1780–1809)ರ ಕಾಲ. ಈತನು ಬರೆಯಿಸಿರುವ ರಾಜೇಂದ್ರನಾಮೆ ಮತ್ತು ಹಲವು ಬ್ರಿಟಿಷರ ಬರಹಗಳು ಈ ವಂಶದ ಚರಿತ್ರೆಯ ಕುರಿತು ಸಾಕಷ್ಟು ಮಾಹಿತಿಗಳನ್ನು ನೀಡುತ್ತವೆ.[7]

ಕ್ರಿ.ಶ.17ನೇ ಶತಮಾನದ ಕಾಲಕ್ಕೆ ವೀರರಾಜನೆಂಬ ಇಕ್ಕೇರಿಯ ರಾಜಕುಮಾರ ಜಂಗಮ ವೇಷದಲ್ಲಿ ಕೊಡಗಿಗೆ ಬಂದು ಕೊಡಗಿನ ಪಕ್ಕದಲ್ಲಿರುವ ಹಾಲೇರಿಯಲ್ಲಿ ವಾಸ್ತವ್ಯ ಇದ್ದನೆಂದು ತಿಳಿದುಬಂದಿದೆ. ಆತನೇ ಹಾಲೇರಿಯ ವಂಶದ ಮೂಲ ಸ್ಥಾಪಕನಾದನು. ಅಪ್ಪಾಜಿರಾಜನ ಮಗ ಮುದ್ದುರಾಜ ಕ್ರಿ.ಶ.1633–87ರವರೆಗೆ ಈ ಭಾಗದಲ್ಲಿ ಆಳ್ವಿಕೆಯನ್ನು ನಡೆಸಿದ್ದಾನೆ. ಈತನು ಮಡಿಕೇರಿಯಲ್ಲಿ ಅರಮನೆಯನ್ನು ಹಾಗೂ ಅದರ ಸುತ್ತಲೂ ಭದ್ರವಾದ ಕೋಟೆಯನ್ನು ನಿರ್ಮಿಸಿದನೆಂದು ತಿಳಿದುಬಂದಿದೆ. ಅಂದಿನ ಕಾಲಕ್ಕೆ ಈತನು ಅತ್ಯಂತ ಶಕ್ತಿವಂತ ರಾಜನಾಗಿದ್ದನೆಂದು ಹೇಳಿಕೆಗಳಿವೆ. ಈತನು ಪಕ್ಕದ ಪಿರಿಯಾಪಟ್ಟಣ ಮೈಸೂರು ಅರಸರಿಂದ ದಾಳಿಗೆ ತುತ್ತಾದ ಸಂದರ್ಭದಲ್ಲಿ ಅದನ್ನು ಸಂರಕ್ಷಿಸುವ ಕೆಲಸವನ್ನು ಮಾಡಿದನು. ಮುದ್ದುರಾಜನಿಗೆ ದೊಡ್ಡವೀರಪ್ಪ (1687–1736) ಅಪ್ಪಾಜಿರಾಜ ಮತ್ತು ನಂದರಾಜ ಎಂಬ ಮೂವರು ಮಕ್ಕಳಿದ್ದರು. ದೊಡ್ಡವೀರ್ಪಪ ತಂದೆಯ ಮರಣಾನಂತರ ಪಟ್ಟಕ್ಕೆ ಬಂದ. ಹೀಗೆ ತಂದೆ ನಂತರ ಕಾಲಕ್ಕೆ 13 ಜನರು ಆಳ್ವಿಕೆ ನಡೆಸುತ್ತಾರೆ. ಅಪ್ಪಾಜಿರಾಜ, ಮುದ್ದಯ್ಯ, ಚಿಕ್ಕವೀರಪ್ಪ, ಮುದ್ದುರಾಜ ಮೊದಲನೆಯ ರಾಜೇಂದ್ರ, ಮಲ್ಲಯ್ಯ, ಅಪ್ಪಾಜಿ, ದೇವಪ್ಪರಾಜ, ವೀರರಾಜೇಂದ್ರ, ಎರಡನೆಯ ಲಿಂಗರಾಜೇಂದ್ರ, ದೊಡ್ಡವೀರರಾಜೇಂದ್ರ ಒಡೆಯರ್, ದೇವಮ್ಮಾಜಿ, ಎರಡನೆಯ ವೀರರಾಜೇಂದ್ರ ಅವರು ಆಳ್ವಿಕೆ ನಡೆಸಿದ್ದಾರೆ. ಹಾಲೇರಿ ಅರಸರು ಒಟ್ಟು 19 ರಾಜರು ಆಳ್ವಿಕೆ ಮಾಡಿದ್ದಾರೆ.[8]

**ಹಾಲೇರಿಯಲ್ಲಿ ಧಾರ್ಮಿಕ ಆರಾಧನೆ**

ಹಾಲೇರಿಯಲ್ಲಿ ಪ್ರತಿವರ್ಷ ಭದ್ರಕಾಳಿಯ ಹಬ್ಬವು ಸುಮಾರು 15 ದಿನಗಳವರೆಗೆ ಮೊದಲಿಗೆ ನಡೆಯುತ್ತಿತ್ತು. ಆದರೆ ಅದು ಈವಾಗ 8 ದಿವಸಗಳಿಗೆ ಮಾತ್ರ ಸೀಮಿತವಾಗಿದೆ. ಅದು ಯುಗಾದಿ ಹಬ್ಬದ ಸಂದರ್ಭದಲ್ಲಿ ಅದೇ ದಿವಸ ನಡೆಯುತ್ತದೆ. ಅಂದು ಮಡಿಯಿಂದಿರಲು ಹಾಗೂ ತುಂಬಾನೇ ಭಕ್ತಿಯಿಂದ ಸ್ಥಳೀಯ ಪ್ರಕಾರ ಕಟ್ಟುಕಟ್ಟಳೆಗಳನ್ನು ಪಾಲಿಸಲೇಬೇಕು. ಹಬ್ಬದ ದಿನದಂದು ತೆಂಗೆಪೋಡು (ತೆಂಗು) ಕಸಿಯುವ ಪ್ರದರ್ಶನವನ್ನು ನಡೆಸುತ್ತಾರೆ. ಕೈತಲೆ, ಆಟ, ಭದ್ರಕಾಳಿ ಮೊದಲು ನಿಂತ ನೆಲೆಯಲ್ಲಿ ತಳೆಯಕ್ಕಿ ಬೊಳಕು (ಅಕ್ಕಿದೀಪ) ಇಟ್ಟು ಆಡುವ ಕುಣಿತ, ಬೊಳ್‌ಕಾಟ್ ಹಾಗೂ ಕೊಂಬಾಟ್ ನೃತ್ಯ ಅರಪ್ಪತೆರೆ, (ದೇವರಕರೆನ ಘೋಷ) ಕಾಳೆ ಓಡಿಸುವುದು[9] (ಆಡುಗಳನ್ನು ಓಡಿಸುವುದು) ಬೊಳ್‌ಕಾಟ್ ಎಂದರೆ ಭಸ್ಮಾಸುರನನ್ನು ಶಿವನು ಸಂಹಾರ ಮಾಡಿದ ಸಂದರ್ಭದಲ್ಲಿ 32 ಭಂಗಿಗಳಲ್ಲಿ ತೋರಿದ ನೃತ್ಯದ ಸಂಕೇತವೇ ಈ ಬೊಳ್‌ಕಾಟ್. ಬೊಳಕ್ ಎಂದರೆ ಬೆಳಕು, ದೀಪ ಎಂಬ ಅರ್ಥವಿದೆ. ಈ ಹಾಡ್ಗುಣಿತದಲ್ಲಿ ಕೊಡಗಿನ ಮನೆತನದ ವೀರರ ಇತಿಹಾಸ ಇರುತ್ತದೆ. ದೇಗುಲದ ಮುಂದೆ ದೀಪಾಲೆ ಕಂಬವಿಟ್ಟು ತಟ್ಟೆಯಲ್ಲಿ ಅಕ್ಕಿ, ಹಣ್ಣು, ತೆಂಗುದುಡಿ ಕೊಟ್ಟ್‌ಕಾಟ್ ಮೂಲಕ ಈ ಆಟ್‌ಅನ್ನು ದೀಪವನ್ನು ಸುತ್ತುತ್ತಾ ಕುಣಿಯುತ್ತಾರೆ. ರಾತ್ರಿ ಹಾಗೂ ಹಗಲು ವೇಳೆ ಈ ಕುಣಿತವಿರುತ್ತದೆ. ಕಲಾವಿದರು ಒಂದು ಬಲಗೈಯಲ್ಲಿ ಘಡಿಕತ್ತಿ (ಕೊಡಗಿನ ಅಗಲ ತುದಿಯ ವೀರಗತ್ತಿ) ಹಿಡಿದು ದೀಪದ ಸುತ್ತಲೂ ಕುಣಿಯುತ್ತಾರೆ. ಭದ್ರಕಾಳಿ ದೇವಾಲಯದ ಮುಂದೆ ಎಂಟು–ಹತ್ತು ದಿನ ರಾತ್ರಿ ಈ ಬೊಳ್‌ಕಾಟ್ ನಿರಂತರವಾಗಿ ನಡೆಯುತ್ತಿರುತ್ತದೆ.

**ದೋಳ್‌ಕಾಟ್**

ಭಗವತಿ ಮತ್ತು ಭದ್ರಕಾಳಿ ಹಬ್ಬಗಳಲ್ಲಿ ಹಾಡುತ್ತಾರೆ. ದೋಳ್ ಎಂಬ ಚರ್ಮವಾದ್ಯ ಬಳಸಿ ಜನರ ನಡೆನುಡಿಗಳನ್ನು ವಿವೇಚಿಸಿ ಹಾಗೂ ಕೆಲ ವೇಳೆ ಮನೆತನಗಳ ಇತಿಹಾಸವನ್ನು ಹೇಳುತ್ತಾ ಹೋಗುವ ಹಾಡು. ಇದು ಕೊಡವರು ಹಾಗೂ ದಲಿತ ವರ್ಗದವರಿಂದ ಪ್ರತ್ಯೇಕವಾಗಿ ಈ ಕಲಾ ಪ್ರಕಾರಗಳು ಜರುಗುತ್ತವೆ. ಮನೆ ಮನೆ ಹಾಡುವ (ಮನೆಪಾಟ್) ಸಹ ಇರುತ್ತದೆ. ಭದ್ರಕಾಳಿ ಬಳಿ ಚೌಡಿಯು ಬಂದು ತನಗೆ ಆಗುತ್ತಿದ್ದ ಉಪದ್ರವ ಹೇಳಿಕೊಂಡನಂತೆ. ಆಗ ಊರವರ ಮೇಲೆ ಭದ್ರಕಾಳಿದ್ ಅರ್ಶನ ಬಂದು ವಿಷ್ಣು ಮೂರ್ತಿತೆರೆ ಕಟ್ಟಿಸಿಲು ತಿಳಿಸುತ್ತಾರೆ. 18 ಮೊಳದ ಬಿದುರಿನಲ್ಲಿ ಮುಡಿಯನ್ನು ರೂಪಿಸಿ ಕೆಂಪು ಬಿಳಿ ಬಟ್ಟೆ ಹೊದಿಸಿ ಹಳದಿ ಬಣ್ಣದ ಪಾಂಚಾಳೆ ಗರಿಯಿಂದ ಅಲಂಕರಿಸಿ ವರಹಾ ಮುಖವನ್ನು ಹೋಲುವ ವಿಷ್ಣುಮೂರ್ತಿ ಮೊಗವನ್ನು ಹೊದಿಸಿ ಆ ತೆರೆಯನ್ನು ಹೊತ್ತು ನೃತ್ಯ ಮಾಡುತ್ತಾ ಸಾಗುತ್ತಾರೆ.[19]

**ಭಂಗಡೇಶ್ವರದೇವಸ್ಥಾನ**

ಕೊಡಗಿನ ಕಾವೇರಿ ಹಾಗೂ ಗುಪ್ತಗಾಮಿನಿಯಾಗಿದೆಂದು ಚಾರಿತ್ರಿಕ ಹಿನ್ನೆಲೆ ಇರುವ ಸುಜ್ಯೋತಿ ನದಿಗಳ ತ್ರಿವೇಣಿ ಸಂಗಮದಲ್ಲಿರುವ ಭಂಗಡೇಶ್ವರ ದೇವಸ್ಥಾನವನ್ನು ಕ್ರಿ.ಶ.11ನೆಯ ಹಿಂದೆಯೇ ನಿರ್ಮಿಸಲಾಗಿದೆ. ಈ ದೇವಸ್ಥಾನವು ದ್ರಾವಿಡ ಶೈಲಿಯಲ್ಲಿ ಕಟ್ಟಲ್ಪಟ್ಟಿದೆ. ಭಗಂಡ ಋಷಿ ಶಿವಲಿಂಗವನ್ನು ಪ್ರತಿಷ್ಠೆ ಮಾಡಿದ ಕಾರಣದಿಂದ ಈ ದೇವಾಲಯ ಹಾಗೂ ದೇವಸ್ಥಾನಕ್ಕೆ ಭಂಗಡೇಶ್ವರ ಎಂದು ಕರೆಯಲಾಗಿದೆ. ಕಾವೇರಿ ಉಗಮ ಸ್ಥಳ ಭಾಗಮಂಡಲದಲ್ಲಿರುವ ಭಗಂಡೇಶ್ವರ ದೇವಸ್ಥಾನದಲ್ಲಿ ದೊರೆತಿರುವ ಮಿಶ್ರಲಿಪಿಯ ಶಾಸನದಲ್ಲಿ ಈ ಸ್ಥಳವನ್ನು ಭಗಂಡಾಶ್ರಮ ಎಂದು ಕರೆದಿರುವುದರಿಂದ ಶಾಸನ ರಚನೆಯ ಕಾಲಕ್ಕೆ ಆಶ್ರಮ ಒಂದು ಅಸ್ತಿತ್ವದಲ್ಲಿತ್ತೆಂದು ತಿಳಿದುಬರುತ್ತದೆ. ಶಾಸನೋಕ್ತ ಬೋಧರೂಪ ಭಗವರ ಆಶ್ರಮದಲ್ಲಿ ಸ್ವಲ್ಪ ಸಮಯ ಇದ್ದಿರಬಹುದು.[11]

ಕೊಡಗನ್ನು ಆಳ್ವಿಕೆ ನಡೆಸಿರುವ ದೊಡ್ಡವೀರರಾಜೇಂದ್ರ ಒಡೆಯ ಭಗಂಡೇಶ್ವರ ದೇವಾಲಯದಲ್ಲಿ ವಿಷ್ಣುಮೂರ್ತಿಯನ್ನು ಸ್ಥಾಪಿಸಿದನು ಮತ್ತು ಇವನೇ ಭಗಂಡೇಶ್ವರ ಉತ್ಸವ ಮೂರ್ತಿಯನ್ನು ಕ್ರಿ.ಶ.1797ರಲ್ಲಿ ಮಾಡಿಸಿದ್ದನೆಂದು ತಿಳಿದುಬಂದಿದೆ.[12] ಭಗಂಡೇಶ್ವರ ದೇವಾಲಯದ ಆವರಣದಲ್ಲಿರುವ ಕಂಚಿನ ದೀಪಮಾಲೆ ಕಂಬವನ್ನು ಕ್ರಿ.ಶ.1881ರಲ್ಲಿ ನೆಲೆಜಿ ಗ್ರಾಮದ ಮಣವಟ್ಟ ತಿಮ್ಮಯ್ಯನ ಮಗ ಬೆಳ್ಳಿಯಪ್ಪ ಮಾಡಿಸಿದ್ದಾನೆಂದು ತಿಳಿದುಬಂದಿದೆ.[13] ಇದೇ ದೇವಸ್ಥಾನದ ಪ್ರಾಕಾರದ ಪ್ರವೇಶದ ಮಧ್ಯದಲ್ಲಿರುವ ಬಾಗಿಲುವಾಡದ ಅಲಂಕಾರವನ್ನು ದೊಡ್ಡವೀರರಾಜೇಂದ್ರನು ಮಾಡಿಸಿದನೆಂದು ತಿಳಿದುಬಂದಿದೆ.[14] ಭಗಂಡೇಶ್ವರ ದೇವಾಲಯ ಖಜಾನೆಯಲ್ಲಿರುವ ಬೆಳ್ಳಿಯ ಪೀಠದ ಮೇಲೆ ಶಾಸನವಿದೆ.[15] ಕ್ರಿ.ಶ.1839ರಲ್ಲಿ ಕೊಡಗಿನಲ್ಲಿದ್ದ ಬ್ರಿಟಿಷ್ ಸೂಪರಿಂಟೆಂಡೆಂಟ್ ಕ್ಯಾಪ್ಟನ್ ಲೀ ಹಾರ್ಡಿಯ ಕಾಲದಲ್ಲಿ ದಿವಾನ್ ಪೂಂನಪ್ಪಯಿ ಬೋಪ್ಪ ಹಾಗೂ ಮೀನಾಕ್ಷಯ್ಯ ಎಂಬ ಅಧಿಕಾರಿಗಳು ಬೆಳ್ಳಿ ಖಜಾನೆಯ ಪೀಠ, ಬೆಳ್ಳಿ ಪ್ರಭಾವಳಿ, ಮೂರು ಚಿನ್ನದ ಛತ್ರಿಗಳು ಎರಡು ಸೂರ್ಯಪನ ಮತ್ತು ಎರಡು ಪತ್ತಕ (ಪದಕ)ಗಳನ್ನು ಮಾಡಿಸಿ ದೇವರಿಗೆ ನೀಡಿರುವುದು ತಿಳಿದುಬರುತ್ತದೆ. ಈ ಭಗಂಡೇಶ್ವರ ದೇವಾಲಯದ ಹೊರ ಪ್ರಕಾರದಲ್ಲಿ ಗಣಪತಿಯ ಚಿಕ್ಕಗುಡಿಯಿದೆ. ಭಾಗಮಂಡಲದಲ್ಲಿ ಕಾಶಿಮಠ ಶಾಖೆ ಮತ್ತು ರಾಮ ಮಂದಿರಗಳಿವೆ. ಆದರೆ ಇವುಗಳಿಗೆ ಸಂಬಂಧಿಸಿದಂತೆ ಯಾವುದೇ ತರಹದ ಶಾಸನಗಳು ದೊರೆತಿಲ್ಲ.

ಕೊಡಗು ಜಿಲ್ಲೆಯಲ್ಲಿ ಹಾಲೇರಿ ಮನೆತನದ ಅರಸರು ತಮ್ಮದೇ ಆದ ಇತಿಹಾಸವನ್ನು ಸೃಷ್ಟಿಸಿದ್ದಾರೆ. ಆದರೆ ಪ್ರಸ್ತುತ ಇಲ್ಲಿ ಕೇವಲ ಅವರ ಹಿನ್ನೆಲೆ ಹಾಗೂ ಹಾಲೇರಿಯ ಭದ್ರಕಾಳಿ ಜಾನಪದ ಆರಾಧನೆಯನ್ನು ಹಾಗೂ ಭಗಂಡೇಶ್ವರ ದೇವಸ್ಥಾನದ ಚಾರಿತ್ರಿಕ ಇತಿಹಾಸವನ್ನು ಕುರಿತು ಚರ್ಚಿಸಲಾಗಿದೆ.

**ಕೊಡವರ ನಾಡಲ್ಲಿ ನೃತ್ಯ ಸಿರಿಯ ವೈಭವದ ಹಿನ್ನೆಲೆ**

ಭಾರತದಲ್ಲಿ ವಿಶೇಷವಾದ ಆಚಾರ-ವಿಚಾರ ಸಂಸ್ಕೃತಿಯನ್ನು ಹೊಂದಿರುವ ಜಿಲ್ಲೆ ಕೊಡಗು. ಈ ಜಿಲ್ಲೆಯನ್ನು ಕೊಡುಗು ಮಲೆನಾಡು ದಕ್ಷಿಣ ಭಾರತದ ಡಾರ್ಜಲಿಂಗ್ ಕಾವೇರಿ ತವರು ಮನೆ, ಪ್ರಕೃತಿಯ ನೆಲೆಬೀಡು, ಕಾಫಿಯ ಕಣಜ, ವೀರರ ನಾಡು ಎಂಬಿತ್ಯಾದಿ ಹೆಸರುಗಳಿಂದ ಕರೆಯುತ್ತಾರೆ. ಪುಟ್ಟದಾದ ಕೊಡಗು ಜಿಲ್ಲೆಯಲ್ಲಿ ಸಂಪದ್ಭರಿತವಾದ ಸದಾ ಹಚ್ಚ ಹಸುರಿನ ಪ್ರಕೃತಿಯು ನೆಲೆಸಿರುವಂತೆಯೇ ಕೊಡಗಿನ ಆಚಾರ-ವಿಚಾರಗಳು ಹಬ್ಬ-ಹರಿದಿನಗಳ ಆಚರಣೆಗಳು ವಿಶೇಷವಾಗಿವೆ. ಕೊಡಗಿನ ಪದ್ಧತಿಗಳು ಈ ಸಂದರ್ಭದಲ್ಲಿ ಹಮ್ಮಿಕೊಳ್ಳುವ ಸಂಸ್ಕೃತಿ ಪ್ರತಿಬಿಂಬಿಸುವ ನೃತ್ಯಗಳು, ವೇಷಭೂಷಣಗಳು, ಹಾಡುಗಳು ಜನರ ಬದುಕಿನಲ್ಲಿ ಹಾಸುಹೊಕ್ಕಾಗಿದೆ. ಪ್ರತಿಯೊಂದು ತನ್ನದೇ ಆದ ವಿಶೇಷ ಮಹತ್ವವನ್ನು ಪಡೆದುಕೊಂಡಿದೆ. ಕೊಡಗಿನ ನೃತ್ಯಗಳು ಒಂದಕ್ಕಿಂತ ಒಂದು ಸುಂದರವಾದದ್ದು, ಕಣ್ಮನ ತುಂಬುತ್ತದೆ. ನೃತ್ಯಗಳ ಸಂದರ್ಭದಲ್ಲಿ ಬಳಸುವ ಹಾಡುಗಳು ಕೂಡ ಸಂಸ್ಕೃತಿಯೊಂದಿಗೆ ಬೆಸೆದುಕೊಂಡಿದೆ. ಸಂಸ್ಕೃತಿಯನ್ನು ವಿವರಿಸುವುದು, ದೇವಿಯನ್ನು ಆರಾಧಿಸುವುದು ಜನ ಸಮುದಾಯದ ಹಿತ ಬಯಸುವುದು ಮೊದಲಾದವು ನೃತ್ಯ ಹಾಡುಗಳಲ್ಲಿ ಕಂಡುಬರುತ್ತದೆ.

ನಾಡಿನ ಜೀವನದಿಯಾದ ಕಾವೇರಿ ಉಗಮ ಸ್ಥಾನ ಕೊಡಗಿನಲ್ಲಿರುವುದರಿಂದ ಇಲ್ಲಿನ ಸಂಸ್ಕೃತಿಯಲ್ಲೂ ಈ ನದಿ ಹಾಸುಹೊಕ್ಕಾಗಿದೆ. ಕೊಡಗಿನ ಜಾನಪದ ನೃತ್ಯವಾದ ಉಮ್ಮತ್ತಾಟ್‌ದಲ್ಲಿ ಕಾವೇರಿಮ್ಮೆದೇವಿ ತಾಯಿ ಕಾಪಡೆಂಗಳಾ ಎಂಬ ದೇವಿ ಸ್ತುತಿಯೊಂದಿಗೆ ನೃತ್ಯ ಪ್ರಾರಂಭಿಸಲಾಗುತ್ತದೆ. ಬಂಡೀರಾ, ಬೆಂದ್‌ಕ್ಕೆಲ್ಲಾ, ನಿಂಗೆಲ್ಲಾ ಚಾಯಿತ್ತೆಳ್ಳೀರಲ್ಲಾ ಎಂಬ ಹಾಡಿನ ಸಾಲುಗಳು ಕೊಡಗಿನ ಅತಿಥಿ ಸತ್ಕಾರವನ್ನು ಪ್ರತಿಬಿಂಬಿಸುತ್ತದೆ. ಶ್ರೀಕಾವೇರಿ ಮಾತೆ ಮೂಗೂರು ಇಗ್ಗುತ್ತಪ್ಪ ಅಯ್ಯಪ್ಪ ಭಗವತಿ ಮೊದಲಾದ ದೇವರ ಆರಾಧನೆಯು ನೃತ್ಯಗಳಲ್ಲಿ ಹಾಸುಹೊಕ್ಕಾಗಿದೆ. ಹಲವು ನೃತ್ಯಗಳಲ್ಲಿ ನಾಡಿನ ವೀರರ ಶೌರ್ಯವನ್ನು ಪ್ರತಿಬಿಂಬಿಸಲಾಗುತ್ತದೆ.

ಕೊಡಗಿನ ನೃತ್ಯ ಹಾಗೂ ನಾಡಿನ ಪ್ರಕಾರಗಳಲ್ಲಿ ಉಮ್ಮತ್ತಾಟ್, ಬೊಳಕಾಟ್, ಕೊಂಬಾಟ್, ಪರೆಯಕಳಿ, ಕತ್ತರಿಕಟ್ ಇನ್ನೂ ಮುಂತಾದವು ಇವೆ. ನೃತ್ಯಗಳಲ್ಲಿ ತಾಳ, ದುಡಿ, ಒಡಿಕತ್ತಿ, ಪೀಕೆ ಕತ್ತಿಗಳನ್ನು ಕೆಲವು ಸಂದರ್ಭಗಳಲ್ಲಿ ಬಳಸಲಾಗುತ್ತದೆ. ವಿಶೇಷವಾದ ವೇಷಭೂಷಣ ಆಭರಣಗಳೂ ಮನಸ್ಸನ್ನು ಆಕರ್ಷಿಸುತ್ತದೆ. ಕೃಷ್ಣಮೃಗದ ಕೊಂಬನ್ನು ತಲೆಯ ಮೇಲೆ ಇಟ್ಟುಕೊಂಡು ಆಡುವ ಕೊಂಬ್‌ಆಟ್‌ಅನ್ನು ದೇಗುಲಗಳಲ್ಲಿ ನಡೆಯುವ ಉತ್ಸವದ ಸಂದರ್ಭದಲ್ಲಿ ದೇಗುಲದ ಆವರಣದಲ್ಲಿ ಹಾಡಲಾಗುತ್ತದೆ.

ಕೊಡಗಿನ ಪ್ರಮುಖ ಹಬ್ಬಗಳಾದ ಕೈಲ್‌ಪೋಲ್ಡ್ ಹಾಗೂ ಹುತ್ತರಿ ಹಬ್ಬದ ಸಂದರ್ಭದಲ್ಲಿ ಎಲ್ಲಾ ಒಂದಾಗಿ ಒಂದೆಡೆ ಸೇರಿ ಹಮ್ಮಿಕೊಳ್ಳುವ ಕಾರ್ಯಕ್ರಮಗಳಲ್ಲಿ ಉಮ್ಮತ್ತಾಟ್, ಬೊಳಕಾಟ್, ಪರೆಯಕಳಿ ಮೊದಲಾದವುಗಳನ್ನು ಪ್ರದರ್ಶಿಸಲಾಗುತ್ತದೆ. ವಾಲಗದ ಈ ಶಬ್ಧಕ್ಕೆ ಸರಿಯಾಗಿ ನರ್ತಿಸುವ

ವಾಲಗತ್ತಾಟ್ ಕೂಡ ಮೈಮನ ಸೂರೆಗೊಳ್ಳುತ್ತದೆ. ದಣಿವರಿಯದಂತೆ ಮಾಡುವ ನೃತ್ಯ ನೋಡುಗರ ಮೈಮನ ಪುಳಕಿತಗೊಳಿಸುತ್ತದೆ. ನೃತ್ಯ ಹಾಡುಗಳು ಮಾನಸಿಕವಾಗಿ ಹಾಗೂ ದೈಹಿಕವಾಗಿ ಹುಮ್ಮಸ್ಸು ನೀಡುತ್ತದೆ. ಹಲವು ನೃತ್ಯಗಳನ್ನು ದೇಗುಲದಲ್ಲಿ ಉತ್ಸವದಲ್ಲಿ ಮಾತ್ರ ಪ್ರದರ್ಶಿಸಲಾಗುತ್ತದೆ. ಕೊಡಗಿನ ಸಂಸ್ಕೃತಿ ಹಾಗೂ ನೃತ್ಯ ಹಾಡುಗಳನ್ನು ನಿರಂತರವಾಗಿ ಉಳಿಸಲು ಹಲವು ಸಂಘ ಸಂಸ್ಥೆಗಳು ನಿರಂತರವಾಗಿ ಶ್ರಮಿಸುತ್ತಿವೆ. ಕೊಡಗಿನ ಸಂಸ್ಕೃತಿಯನ್ನು ದೇಶ-ವಿದೇಶಗಳಲ್ಲಿ ಪಸರಿಸುವಂತೆ ಶ್ರಮಿಸುತ್ತಿದೆ. ದೇಶ, ರಾಜ್ಯ, ಜಿಲ್ಲಾ ಮಟ್ಟಗಳಲ್ಲಿ ನಡೆದಕೊಡ್ವ ಮೇಳಗಳಲ್ಲಿ ನೃತ್ಯಗಳು ಪ್ರದರ್ಶನಗೊಂಡು ಜನರ ಅಭಿಮಾನದಿಂದ ಹುಬ್ಬೇರಿಸುವಂತೆ ಮಾಡಿದೆ. ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ, ಕೊಡವ ಸಮಾಜ, ಕೊಡವ ಸಂಘ ಸಂಸ್ಥೆಗಳು ಆಗಿಂದಗ್ಗೆ ಕಮ್ಮಟಗಳನ್ನು ಏರ್ಪಡಿಸಿ ಯುವ ಪೀಳಗೆಗೆ ಕೊಡಗಿನ ಸಾಂಪ್ರದಾಯಿಕ ನೃತ್ಯಗಳನ್ನು ಹಾಡುಗಳನ್ನು ಪ್ರತಿಭಾವಂತ ಸಂಪನ್ಮೂಲ ವ್ಯಕ್ತಿಗಳಿಂದ ಕಲಿಸಿಕೊಡುತ್ತಿದೆ. ಯುವಜನತೆಗೆ ಭಾಷಾ ಸಂಸ್ಕೃತಿ ನಾಡಿನ ಬಗೆಗೆ ಅಭಿಮಾನ ಮೂಡಿಸುತ್ತಿದೆ. ನಿಜಕ್ಕೂ ಇದು ಸ್ವಾಗತಾರ್ಹ ಬೆಳವಣಿಗೆ. ಅದು ಮುಂದಿನ ಪೀಳಗೆಗೆ ಈ ಸಂಸ್ಕೃತಿಯನ್ನು ಉಳಿಸುವ ಕೆಲಸವಾಗಬೇಕಾಗಿದೆ.

**ಕೊನೆ ಟಿಪ್ಪಣಿಗಳು**

1. ಸುರೇಶ್ ಬಿ. ಹೂಗಾರ, ಕರ್ನಾಟಕದ ಪ್ರಮುಖ ಐತಿಹಾಸಿಕ ಸ್ಥಳಗಳು, ವಾಸನ್ ಪಬ್ಲಿಕೇಷನ್ಸ್, ಬೆಂಗಳೂರು, 2010, ಪು.ಸಂ.11.
2. ಕೃಷ್ಣಯ್ಯಡಿ.ಎನ್, ಕೊಡಗಿನ ಇತಿಹಾಸ, ಪ್ರಸಾರಾಂಗ, ಮೈಸೂರು ವಿವಿ, ಮಾನಸಗಂಗೋತ್ರಿ, ಮೈಸೂರು, 1974, ಪು.ಸಂ.21.
3. ಅದೇ, ಪು.ಸಂ.23.
4. ಅದೇ, ಪು.ಸಂ.25.
5. ಒ.ಕೆ.ಜೋಣಿ, ಕಾವೇರಿ ತೀರದ ಪಯಣ, ನವಕರ್ನಾಟಕ ಪ್ರಕಾಶನದ 5691ನೇ ಪ್ರಕಟಣೆ, ಬೆಂಗಳೂರು, 2021, ಪು.ಸಂ.44.
6. ಡಾ.ಲಲಿತ ಕೆ.ಪಿ, ವಿವಕ್ಷಾ (ಕೊಡಗು ಕುರಿತ ಸಂಶೋಧನಾ ಲೇಖನಗಳು), ಯಾಜಿ ಪ್ರಕಾಶನ, ಹೊಸಪೇಟೆ, 2015, ಪು.ಸಂ.13.
7. ಡಾ.ಅಂಬಳಿಕೆ ಹಿರಿಯಣ್ಣ, ಕನ್ನಡ ವಿಷಯ ವಿಶ್ವಕೋಶ, ಇತಿಹಾಸ ಮತ್ತು ಪುರಾತತ್ವ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, 2009, ಪು.ಸಂ.1132.
8. ಅದೇ, ಪು.ಸಂ.1132.
9. ಡಾ.ಲಲಿತ ಕೆ.ಪಿ, ಪೂರ್ವೋಕ್ತ, ಪು.ಸಂ.19.

10. ಡಾ.ಎಂ.ಜಿ.ನಾಗರಾಜ್, ಇತಿಹಾಸ ದರ್ಶನ ಸಂಪುಟ–24/2009, ಕರ್ನಾಟಕ ಇತಿಹಾಸ ಅಕಾಡೆಮಿ (ರಿ), ಬೆಂಗಳೂರು, ಪು.ಸಂ.259, 260.
11. ಎ.ಕ.ಸಂಪುಟ–1, ಮಡಿಕೇರಿ ಶಾಸನ ಸಂಖ್ಯೆ–21.
12. ಎ.ಕ.ಸಂಪುಟ–1, ಮಡಿಕೇರಿ ಶಾಸನ ಸಂಖ್ಯೆ–22.
13. ಎ.ಕ.ಸಂಪುಟ–1, ಮಡಿಕೇರಿ ಶಾಸನ ಸಂಖ್ಯೆ–23.
14. ಕೊಡಗು ಜಿಲ್ಲಾ ಗ್ಯಾಸೆಟಿಯರ್, 1992, ಪು.ಸಂ.837.
15. ಎ.ಕ.ಸಂಪುಟ–1, ಮಡಿಕೇರಿ ಶಾಸನ ಸಂಖ್ಯೆ–24.